ಅ) ಹೌದು

ಇ) ಜಿಟಿಟಿಸಿ ಸಂಸ್ಥೆಯ ಆಂತರಿಕ ಲೆಕ್ಕ ಪರಿಶೋಧಕರಿಂದ ಹಾಗೂ ಶಾಸನ ಬದ್ಧ ಲೆಕ್ಕ ಪರಿಶೋಧಕರಿಂದ ಅಗತ್ಯವಿರುವ ಎಲ್ಲಾ ಲೆಕ್ಕ ತಪಾಸಣೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಚಿಂತಾಮಣಿ ಕ್ಷೇತ್ರದಲ್ಲಿ ಮೀನು ಸಾಕಾಣಿಕೆದಾರರಿಗೆ ಸೌಲಭ್ಯ

1577 (2068) ಶ್ರೀ ಎ. ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಕುಟುಂಬಗಳು ಹಾಗೂ ಮೀನುಗಾರಿಕೆ ಸಹಕಾರ ಸಂಘಗಳು ಎಷ್ಟಿವೆ?

ಆ) ಮೀನುಗಾರಿಕೆ ಕುಟುಂಬದವರಿಗೆ 1999 ರಿಂದೀಚೆಗೆ ಯಾವ್ಯಾವ ಯೋಜನೆಗಳಲ್ಲಿ ಸವಲತ್ತುಗಳನ್ನು ನೀಡಲಾಗಿದೆ?

ಇ) ಅಂತಹ ಯೋಜನೆಗಳಲ್ಲಿ ಎಷ್ಟು ಜನರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ? ಅವುಗಳ ಪೈಕಿ ಎಷ್ಟು ಜನ ಫಲಾನುಭವಿಗಳಿಗೆ ಏನೇನು ಸೌಕರ್ಯಗಳನ್ನು ನೀಡಲಾಗಿದೆ?

ಈ) ಈ ಯೋಜನೆಗಳಲ್ಲಿ ಅರ್ಜಿ ಸಲ್ಲಿಸಿಯೂ ವಂಚಿತರಾದಂತಹ ಅರ್ಹ ಫಲಾನುಭವಿಗಳಿಗೆ ಮತ್ತೇ ಸೌಕರ್ಯಗಳನ್ನು ಕಲ್ಪಿಸಲು ಏನೇನು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ವಿ. ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಚಿಂತಾಮಣಿ ಕ್ಷೇತ್ರದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ಸುಮಾರು 2150 ಕುಟುಂಬಗಳಿವೆ. ಒಂದು ಮೀನುಗಾರಿಕೆ ಸಹಕಾರ ಸಂಘ ತಳಗವಾರದಲ್ಲಿದೆ.

ಆ) ಮೀನುಗಾರಿಕೆ ಕುಟುಂಬದವರಿಗೆ 1999 ರಿಂದೀಚೆಗೆ

1) ಹುಡ್ಕೋ ನೆರವಿನ ಮತ್ಸ್ಯ ಆಶ್ರಯ

2) ವಿಶೇಷ ಘಟಕ ಯೋಜನೆ

3) ಮೀನು ಮಾರಾಟ ಮತ್ತು ಸಂಸ್ಕರಣೆ

4) ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ ಮತ್ತು

5) ಮಹಿಳಾ ಮೀನುಗಾರರಿಗೆ ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಸಹಾಯಧನ ಯೋಜನೆಗಳಡಿ ವಿವಿಧ ಸವಲತ್ತುಗಳನ್ನು ನೀಡಲಾಗಿದೆ.

ಇ) ಹುಡ್ಕೋ ನೆರವಿನ ಮತ್ಸ್ಯ ಆಶ್ರಯ ನೆರವಿನ ಯೋಜನೆಯಲ್ಲಿ 55 ನಿರ್ವಸತಿ ಮೀನುಗಾರರು ಮೀನುಗಾರಿಕೆ ವಸತಿ ಸೌಕರ್ಯವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಉಳಿದ ಯೋಜನೆಗಳಲ್ಲಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಅರ್ಜಿಗಳನ್ನು ಪಡೆಯಲಾಗಿರುತ್ತದೆ.

ನೀಡಲಾಗಿರುವ ಸೌಕರ್ಯ ಈ ಕೆಳಗಿನಂತಿರುತ್ತದೆ.

1) ಹುಡ್ಕೋ ನೆರವಿನ ಮತ್ಸ್ಯ ಆಶ್ರಯ ಯೋಜನೆ
(ತಲಾ ರೂ. 30,000 ಧನ ಸಹಾಯ)

1) 1999-2000 - ಇಲ್ಲ
2) 2000-2001 - 10
3) 2001-2002 - -
4) 2002-2003 - 10

2) ವಿಶೇಷ ಘಟಕ ಯೋಜನೆ (ತಲಾ ರೂ. 3000 ಸಹಾಯಧನ)

1) 1999-2000 - 5
2) 2000-2001 - 6
3) 2001-2002 - 6
4) 2002-2003 - 5

3) ಮೀನು ಮಾರಾಟ ಮತ್ತು ಸಂಸ್ಕರಣೆ:
(ತಲಾ ರೂ. 1250 ಸಹಾಯಧನ)

1) 1999-2000 - -
2) 2000-2001 - -
3) 2001-2002 - 1
4) 2002-2003 - 2

4) ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯ ಧನ:-
(ರೂ. 10,000 ಸಹಾಯಧನ)

1) 1999-2000 - -
2) 2000-2001 - 1
3) 2001-2002 - -
4) 2002-2003 - -

5) ಮಹಿಳಾ ಮೀನುಗಾರರಿಗೆ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಲು ಸಹಾಯಧನ:-
(ತಲಾ ರೂ. 50 ಸಹಾಯಧನ)

1) 1999-2000 - -
2) 2000-2001 - 10
3) 2001-2002 - 10
4) 2002-2003 - -

ಈ) ಅರ್ಜಿ ಸಲ್ಲಿಸಿಯೂ ವಂಚಿತರಾದ ಅರ್ಹ ಫಲಾನುಭವಿಗಳಿಗೆ ಮುಂದಿನ ವರ್ಷಗಳಲ್ಲಿ ಸೌಕರ್ಯಗಳನ್ನು ನೀಡಲು ಪ್ರಯತ್ನಿಸಲಾಗುವುದು.

ಬೆಂಗಳೂರಿನ ಗಾಂಧಿನಗರ ಕ್ಷೇತ್ರಕ್ಕೆ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ

1578 (1816) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?